# ಕರ್ನಾಟಕ ವಿಧಾನ ಪರಿಷತ್

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1309
2 ಸದಸ್ಯರ ಹೆಸರು : ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)
3 ಉತ್ತರಿಸಬೇಕಾದ ದಿನಾಂಕ : 27.02.2018
4 ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೈತರ ಸಂತೆ ಎಂದರೇನು; ಈ ಯೋಜನೆಯನ್ನು ಯಾವಾಗಿನಿಂದ ಜಾರಿಗೆ ತರಲಾಗಿದೆ | ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ತಂದು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಎಲ್ಲಾ ಸೌಲಭ್ಯಗಳನ್ನೊಳಗೊಂಡ ವ್ಯವಸ್ಥಿತ ಸಂತೆಯೇ ರೈತರ ಸಂತೆ.<br><br>ಈ ಯೋಜನೆಯನ್ನು 2002 ರಿಂದ ಜಾರಿಗೆ ತರಲಾಗಿದೆ. |
| ಆ | ರಾಜ್ಯದಲ್ಲಿರುವ ಒಟ್ಟು ರೈತರ ಸಂತೆಗಳ ಸಂಖ್ಯೆ ಎಷ್ಟು; ಅವು ಯಾವುವು; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು) | ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಯಲಹಂಕ ಸಂತೆ ಮೈದಾನದಲ್ಲಿ ಒಂದು ರೈತರ ಸಂತೆಯನ್ನು ದಿನಾಂಕ: 04.07.2002 ರಿಂದ ಪ್ರಾರಂಭಿಸಲಾಗಿದೆ. |
| ಇ | ರೈತರ ಸಂತೆಯಲ್ಲಿ ಮಳಿಗೆಗಳನ್ನು ತೆರೆಯಲು ನಿಗಧಿಪಡಿಸಿರುವ ಮಾನದಂಡಗಳೇನು; | ಪಹಣಿ ಆಧಾರದ ಮೇಲೆ ಪ್ರತಿದಿನ ಸಂತೆಗೆ ಬರುವ ರೈತರಿಗೆ ಗುರುತಿನ ಚೀಟಿಗಳನ್ನು ನೀಡಿ, ರೈತರ ಸಂತೆಯಲ್ಲಿ ಜಾಗವನ್ನು ನಿಗಧಿಪಡಿಸಿ ಗ್ರಾಹಕರಿಗೆ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಲಾಗುವುದು. |
| ಈ | ರೈತರ ಸಂತೆಯಲ್ಲಿ ರೈತರ ಹೊರತಾಗಿ ಇತರ ವ್ಯಾಪಾರಸ್ಥರು ಮಳಿಗೆಗಳನ್ನು ತೆರೆದು ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಉ | ರೈತರ ಸಂತೆಯಲ್ಲಿ ರೈತರಿಂದ ನೇರ ಮಾರಾಟ ವ್ಯವಸ್ಥೆ ಇರುವ ಬದಲು ಮಧ್ಯವರ್ತಿಗಳೇ ಹೆಚ್ಚಿನ ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಊ | ಮಧ್ಯವರ್ತಿಗಳನ್ನು ಹಾಗೂ ಇತರ ವ್ಯಾಪಾರಸ್ಥರು ರೈತರ ಸಂತೆ ಪ್ರವೇಶಿಸುವುದನ್ನು ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಪಹಣಿ ಆಧಾರದ ಮೇಲೆ ಪ್ರತಿದಿನ ಸಂತೆಗೆ ಬರುವ ರೈತರಿಗೆ ಗುರುತಿನ ಚೀಟಿಗಳನ್ನು ನೀಡುವ ಮೂಲಕ ಮಧ್ಯವರ್ತಿಗಳನ್ನು ಹಾಗೂ ಇತರೆ ವ್ಯಾಪಾರಸ್ಥರು ರೈತರ ಸಂತೆ ಪ್ರವೇಶಿಸುವುದನ್ನು ತಡೆಯಲು ಕ್ರಮ ವಹಿಸಲಾಗಿದೆ. ಹಾಗೂ ಸ್ಥಳೀಯ ಅಧಿಕಾರಿಗಳು ಈ ಕುರಿತಂತೆ ನಿರಂತರವಾಗಿ ಪರಿಶೀಲಿಸಲು ಸಹ ತಿಳಿಸಲಾಗಿರುತ್ತದೆ. |

ಸಂಖ್ಯೆ: ಸಇ 88 ಎಂಆರ್ಇ 2018

(ಎಸ್.ಎಸ್. ಮಲ್ಲಿಕಾರ್ಜುನ್)
ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು

ಎಸ್.ಎಸ್. ಮಲ್ಲಿಕಾರ್ಜುನ್